

# ಮನುರಂಜನ್ ಮುಗಿಲ ಕನಸು

ರವಿಚಂದ್ರನ್ ಮಗ ಮನುರಂಜನ್ ರವಿಚಂದ್ರನ್‌ಗೆ ಇನ್ನೂ ಕನ್ನಡ ಚಿತ್ರರಂಗದಲ್ಲಿ ಅದೃಷ್ಟ ದೇವತೆ ನೆತ್ತಿ ಸವರಿಲ್ಲ. 'ಸಾಹೇಬ'ದ ಮೂಲಕ ಕೊಟ್ಟ ಸಿಂಪಲ್ ಎಂಟ್ರಿ, 'ಬೃಹಸ್ಪತಿ'ಯ ಮಾಸ್ ರೂಪ ಯಾವುದಕ್ಕೂ ಪ್ರೇಕ್ಷಕ ಹುಬ್ಬೇರಿಸಲಿಲ್ಲ. ಆದರೆ ಇದರಿಂದ ಮನೋರಂಜನ್ ಏನೂ ಎದೆಗುಂದಿಲ್ಲ. ಇಂದಲ್ಲ ನಾಳೆ ಪ್ರೇಕ್ಷಕರು ನನ್ನನ್ನು ಒಪ್ಪಿಕೊಂಡೇ ಒಪ್ಪಿಕೊಳ್ತಾರೆ ಎಂಬ ನಂಬಿಕೆಯಲ್ಲಿ ಮುಂದಡಿ ಇಡುತ್ತಲೇ ಇದ್ದಾರೆ.

ಸದ್ಯಕ್ಕೆ ಅವರು ಮುಗಿಲ ಧ್ಯಾನದಲ್ಲಿದ್ದಾರೆ. ಅವರ ಹೊಸ ಸಿನಿಮಾ ಹೆಸರು 'ಮುಗಿಲ್ ಪೇಟೆ'. ಕಳೆದ ಎರಡೂ ಸಿನಿಮಾಗಳಿಗಿಂತ ಭಿನ್ನವಾದ ರೂಪದಲ್ಲಿ ಅವರು ಈ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರಂತೆ. ಬರೀ ಒಂದೇ ಭಿನ್ನ ರೂಪ ಅಲ್ಲ; ಮೂರು ಅವತಾರಗಳಲ್ಲಿ ಅವರು ಪ್ರೇಕ್ಷಕರ ಮುಂದೆ ಬರಲಿದ್ದಾರೆ. ಒಂದಲ್ಲಾ ಒಂದು ಲುಕ್‌ಗೆ ಪ್ರೇಕ್ಷಕ ಫಿದಾ ಆಗೇ ಆಗುತ್ತಾನೆ ಎಂಬ ಲೆಕ್ಕಾಚಾರ ಇದ್ದರೂ ಇರಬಹುದು. ಆದರೆ ನಿರ್ದೇಶಕ ಭರತ್ ಎಸ್. ನಾವುಂದ ಇದನ್ನೆಲ್ಲ ಒಪ್ಪುವುದಿಲ್ಲ. ಕಥೆಗೆ ಅಗತ್ಯವಾಗಿದ್ದರಿಂದ ಮೂರು ಶೇಡ್‌ಗಳಿರುವ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎನ್ನುವುದು ಅವರ ಮಾತು. 'ಈ ಚಿತ್ರದಲ್ಲಿ ಹಾಸ್ಯ, ಪ್ರೇಮಕಥೆ, ಸಸ್ಪೆನ್ಸ್, ಫೈಟ್, ಸೆಂಟಿಮೆಂಟ್ ಎಲ್ಲವೂ ಇದೆ. ಹೊಸದೇ ರೂಪದಲ್ಲಿ ಮನುರಂಜನ್ ಅವರನ್ನು ತೋರಿಸುತ್ತಿದ್ದೇವೆ. ಪ್ರೇಮದಲ್ಲಿ ಮುಳುಗಿದ್ದ ಮುಗ್ಧ ಜೋಡಿಗಳು ತಮಗೆ ಅರಿವಿಲ್ಲದೆಯೇ ಆ ಸಂಬಂಧ ಮುರಿದುಬಿದ್ದಾಗ ಏನೆಲ್ಲ ಸಂಕಟಗಳನ್ನು ಅನುಭವಿಸಬೇಕಾಗುತ್ತದೆ ಎಂಬುದೇ ಕಥೆಯ ಎಳೆ' ಎಂದು ಅವರು ವಿವರಿಸುತ್ತಾರೆ. ಕಯಾದು ಲೋಹರ್ ಎಂಬ ಮಾಡೆಲಿಂಗ್ ಲೋಕದ ಬೆಡಗಿ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ■

# ನಕ್ಕು ನಲಿಯಲು ಸುವರ್ಣಾವಕಾಶ

'ಕವಲುದಾರಿ' ಸಸ್ಪೆನ್ಸ್ ಸಿನಿಮಾದಲ್ಲಿ ಟ್ರಾಫಿಕ್ ಪೊಲೀಸ್ ಆಗಿಯೇ ಬೇಹುಗಾರಿಕೆಗೆ ಇಳಿದಿದ್ದ ರಿಷಿ ಈಗ ಹಾಸ್ಯ ಕುದುರೆಯ ಬೆನ್ನೇರಿ ರಂಜಿಸಲು ಸಜ್ಜಾಗಿದ್ದಾರೆ. ಅವರು ನಾಯಕನಾಗಿ ನಟಿಸುತ್ತಿರುವ 'ಸಾರ್ವಜನಿಕರಿಗೆ ಸುವರ್ಣಾವಕಾಶ' ಸಿನಿಮಾ ಡಿ. 20ಕ್ಕೆ ತೆರೆಗೆ ಬರುತ್ತಿದೆ.

ಹೆಸರಲ್ಲಿರುವ ನಾಟಕೀಯತೆ ಸಿನಿಮಾದುದ್ದಕ್ಕೂ ಉಳಿಯುವಂತೆ ನಿರ್ದೇಶಕರು ಈ ಸಿನಿಮಾವನ್ನು ಕಟ್ಟಿದ್ದಾರಂತೆ. ಪೂರ್ತಿಯಾಗಿ ಕಾಮಿಡಿ ಟ್ರ್ಯಾಕಿನ ಮೇಲೆಯೇ ಓಡುವ ಕಥೆಯನ್ನು ಹೊಟ್ಟೆ ಹುಣ್ಣಾಗುವಂತೆ ನಗುತ್ತ ನೋಡುವುದೇ ಸಾರ್ವಜನಿಕರ ಪಾಲಿನ ಸುವರ್ಣಾವಕಾಶ ಎನ್ನುತ್ತಿದೆ ಚಿತ್ರತಂಡ.

ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿರುವುದು ಅನೂಪ್ ರಾಮಸ್ವಾಮಿ ಕಶ್ಯಪ್. ಎರಡೇ ದಿನಗಳಲ್ಲಿ ನಡೆಯುವ ಕಥೆಯನ್ನು ರಂಜನೆಯ ರ‍್ಯಾಪರ್ ಸುತ್ತಿ ಪ್ರೇಕ್ಷಕರಿಗೆ ಕೊಡಲು ರೆಡಿಯಾಗಿದ್ದಾರೆ ಅನೂಪ್. ಅಪ್ಪನ ಸಾಲ ತೀರಿಸಲು ನಾಯಕ ಪಡುವ ಪಡಿಪಾಟಲುಗಳೇ ಈ ಸಿನಿಮಾದ ಮುಖ್ಯ ಹಂದರ. ನಾಯಕನ ಕಸರತ್ತುಗಳಿಗೆ ಕೆಲವೊಮ್ಮೆ ಅಡ್ಡಗಾಲಾಗುತ್ತ ಮತ್ತೆ ಕೆಲವೊಮ್ಮೆ ಹೆಗಲು ಕೊಡುತ್ತ ಜೊತೆಗೇ ಸಾಗುವ ನಾಯಕಿಯಾಗಿ ಧನ್ಯಾ ಬಾಲಕೃಷ್ಣ ಕಾಣಿಸಿಕೊಂಡಿದ್ದಾರೆ. ತಮಿಳು ಭಾಷೆಯ ಹಲವು ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿರುವ ಧನ್ಯಾ, 'ಒಳ್ಳೆಯ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುವ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಬೇಕು' ಎಂಬ ತಮ್ಮ ಕನಸನ್ನು ಈ ಸಿನಿಮಾದ ಮೂಲಕ ಈಡೇರಿಸಿಕೊಂಡಿದ್ದಾರೆ. ಹಾಗಾಗಿ ಇದು ಅವರ ಪಾಲಿಗೂ 'ಸುವರ್ಣಾವಕಾಶ' ಎಂದೇ ಹೇಳಬಹುದು.

ದತ್ತಣ್ಣ, ರಂಗಾಯಣ ರಘು, ಮಿತ್ರ, ಶಾಲಿನಿ – ಹೀಗೆ ಘಟಾನುಘಟಿ ನಟರ ದಂಡೇ ತಾರಾಗಣದಲ್ಲಿದ್ದು, ಪೈಪೋಟಿಯಲ್ಲಿ ಮೇಲೆ ಪ್ರೇಕ್ಷಕಗಣದ ಮೇಲೆ ನಗೆಬುಗ್ಗೆಯನ್ನು ಎಸೆಯಲು ಸಜ್ಜಾಗಿದ್ದಾರೆ.

'ಆಪರೇಷನ್ ಅಲಮೇಲಮ್ಮ', 'ಕವಲುದಾರಿ' ಸಿನಿಮಾಗಳ ಯಶಸ್ಸಿನ ರುಚಿ ಉಂಡಿರುವ ರಿಷಿ ಈಗ ದಾಂಪತ್ಯ ಬದುಕಿನ ಸಿಹಿಸಮಯದಲ್ಲಿದ್ದಾರೆ. ಈ ಸವಿಯನ್ನು 'ಸಾರ್ವಜನಿಕರಿಗೆ ಸುವರ್ಣಾವಕಾಶ'ದ ಯಶಸ್ಸು ಹೆಚ್ಚಿಸುತ್ತದೆ ಎನ್ನುವುದು ಅವರ ನಂಬಿಕೆ. ■

